# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **594**
**ಸದಸ್ಯರ ಹೆಸರು** : ಡಾ|| ಚಂದ್ರಶೇಖರ್ ಬಿ.ಪಾಟೀಲ್ (ಪದವೀಧರರ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 04.03.2021
**ಉತ್ತರಿಸುವ ಸಚಿವರು** : ಮುಖ್ಯಮಂತ್ರಿಗಳು

*****

| | ಪ್ರಶ್ನೆ | ಉತ್ತರ |
|---|---|---|
| ಅ) | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಗೆ ಪೊಲೀಸ್ ವಸತಿ ಗೃಹಗಳಿಂದ ಬರಬೇಕಾದ ವಿದ್ಯುತ್ ಬಿಲ್ ಬಾಕಿ ಮೊತ್ತ ಎಷ್ಟು; | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಗೆ ಪೊಲೀಸ್ ವಸತಿ ಗೃಹಗಳಿಂದ ಜನವರಿ-21 ರ ಅಂತ್ಯದ ವರೆಗೆ ಬರಬೇಕಾದ ವಿದ್ಯುತ್ ಬಿಲ್ ಬಾಕಿ ಮೊತ್ತದ ವಿವರ ಕೆಳಗಿನಂತಿದೆ.<br><br>ಜಿಲ್ಲೆ — ಬಾಕಿ ಮೊತ್ತ ರೂ.ಲಕ್ಷಗಳಲ್ಲಿ<br>ಬೀದರ್ — 38.63<br>ಕಲಬುರಗಿ — 13.11<br>ಯಾದಗಿರ್ — 15.22<br>ರಾಯಚೂರ್ — 11.67<br>ಕೊಪ್ಪಳ — 13.99<br>ಬಳ್ಳಾರಿ — 18.56<br>ಒಟ್ಟು — **111.18** |
| ಆ) | ಸದರಿ ಬಾಕಿ ಬಿಲ್ ವಸೂಲಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | COVID-19 ಸಾಂಕ್ರಾಮಿಕ ರೋಗ ಹರಡಿದ ಹಿನ್ನೆಲೆಯಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸದಂತೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ENERGY 128 PSR 2020, ದಿನಾಂಕ: 08-05-2020 ರನ್ವಯ ಜೂನ್-20 ರವರೆಗೆ ವಿದ್ಯುತ್ ಸಂಪರ್ಕ ಕಡಿತ ಮಾಡಿರದ ಕಾರಣ ಫೆಬ್ರುವರಿ 2020 ರಿಂದ ವಿದ್ಯುತ್ ಬಿಲ್ ಬಾಕಿ ಜಮೆ ಆಗಿರುತ್ತದೆ.<br>ಈಗಾಗಲೇ ಹೆಚ್ಚು ಬಾಕಿ ಇರುವ ಸ್ಥಾವರಗಳನ್ನು ಗುರುತಿಸಲಾಗಿದ್ದು, ವಿಭಾಗವಾರು ಗುರಿಗಳನ್ನು ನಿಗದಿಪಡಿಸಲಾಗಿದೆ, ವಿಶೇಷ ವಸೂಲಾತಿ ಡ್ರೈವ್ ಗಳನ್ನು ಆಯೋಜಿಸಿ ವಿದ್ಯುತ್ ಬಿಲ್ ಬಾಕಿ ವಸೂಲಾತಿ ಮಾಡಲಾಗುತ್ತಿದೆ.<br>ವಸೂಲಾತಿ ಹೆಚ್ಚಿಸಲು ನಿಯಮಿತವಾಗಿ ಅನುಸರಣೆ/ ಪರಿಶೀಲನಾ ಸಭೆಗಳು / ತಪಾಸಣೆ ನಡೆಸಲಾಗುತ್ತದೆ. |
| ಇ) | ಬಿಲ್ ಪಾವತಿಸದ ಪೊಲೀಸ್ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು? (ವಿವರ ನೀಡುವುದು) | ವಿದ್ಯುತ್ ಬಿಲ್ ಬಾಕಿ ಇರುವ ಪೊಲೀಸ್ ವಸತಿ ಗೃಹಗಳ ಬಿಲ್ ಪಾವತಿಸಲು ಸಂಬಂಧಪಟ್ಟ ಜಿಲ್ಲಾ ಪೊಲೀಸ್ ಅಧೀಕ್ಷಕರವರಿಗೆ ಪತ್ರ ಬರೆದು ಬಾಕಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ಎನರ್ಜಿ 58 ಇಬಿಎಸ್ 2021

(ಸಹಿ)
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ